


ಇದ್ದಕ್ಕಿದ್ದಂತೆ ಮನಸ್ತಾಪ ಬಂದಾಗ ಆಕೆ ತನಗೆ ಇನ್ನು ಈ ಸಂಸಾರದ ಜಂಜಾಟವೇ ಬೇಡ ಎಂದು ಹೇಳಿ ಹತ್ತಿರದ ಮಠವೊಂದಕ್ಕೆ ಹೋಗಿ ಅಲ್ಲಿ ಗುರುಬೋಧನೆ ಪಡೆದು ದೀಕ್ಷೆ ತೆಗೆದುಕೊಂಡು ಬಿಟ್ಟಿದ್ದಳು. ಆಮೇಲೆ ಅವಳೂ ತನ್ನಲ್ಲಿಗೆ ಬರುವ ಶಿಷ್ಯರಿಗೆ ಗುರುದೀಕ್ಷೆ ನೀಡುತ್ತಾ 'ಗುರುಗಳಮ್ಮ' ಎಂದೇ ಪ್ರಸಿದ್ಧಿ ಪಡೆದಿದ್ದಳು.

ಲಿಂಗೇಗೌಡರಿಗೆ ತನ್ನ ಹೆಂಡತಿಯ ವರ್ತನೆ, ಸ್ವಭಾವ, ಆಧ್ಯಾತ್ಮಿಕ ನಡವಳಿಕೆಯನ್ನು ಅರ್ಥಮಾಡಿಕೊಳ್ಳಲಾಗದೆ ಅವಳನ್ನು ಅವಳ ಮಾರ್ಗದಲ್ಲೇ ಕೈಬಿಟ್ಟು, ಮತ್ತೆ ಆಕೆಯನ್ನು ಮನೆಗೆ ಕರೆದು ತರಲು ಯತ್ನಿಸಿರಲಿಲ್ಲ. 'ಅವಳಿಗೆ ಎಲ್ಲಿ, ಯಾವುದರಲ್ಲಿ ನೆಮ್ಮದಿ, ಶಾಂತಿ ಸಿಗುತ್ತದೋ ಅಲ್ಲೇ ಇದ್ದು ಬಿಡ್ಲಿ ಬಿಡಿ' ಎಂದು ತನ್ನ ಮಕ್ಕಳಿಗೆ ಹೇಳಿ ಸಮಾಧಾನ ಮಾಡಿದ್ದರು. ಇದರಿಂದ ಲಿಂಗೇಗೌಡರು ತಮ್ಮ ಮಗ ಸಿದ್ದೇಗೌಡರಿಗೆ ಬೇಗನೇ ಮದುವೆ ಮಾಡಿಬಿಟ್ಟಿದ್ದರು. ಆಮೇಲೆ ಮನೆಗೆ ಬಂದ ತನ್ನ ಸೊಸೆ ಚಿನ್ನವ್ವನ ಕೈಯಲ್ಲಿ ಅಟ್ಟುವ ಅಡುಗೆಯನ್ನು ಉಂಡುಕೊಂಡು ಇದ್ದು ಕಾಲ ತುಂಬಿಸಿ ಕಥೆ ಮುಗಿಸಿದ್ದರು. ಚಿನ್ನವ್ವನೂ ಕೊನೆಯವರೆಗೂ ತನ್ನ ಮಾವ, ತನ್ನ ಗಂಡ, ತನ್ನ ಮೈದುನರು ಅಂತ ಸವುರಿಸುತ್ತಾ, ಅವರನ್ನು ನಿಭಾಯಿಸುತ್ತಾ ಬದುಕನ್ನು ಅಚ್ಚುಕಟ್ಟಾಗಿ ನಡೆಸಿದ್ದಳು.

ಸಿದ್ದೇಗೌಡರು ತಮ್ಮ ಅಪ್ಪ ತೀರಿಕೊಂಡ ಮೇಲೆ ತಾವೂ ತಮ್ಮ ತಮ್ಮಂದಿರ ಕಟ್ಟಿಕೊಂಡು ವ್ಯವಸಾಯದಲ್ಲಿ ಅಭಿವೃದ್ಧಿ ಹೊಂದುತ್ತಾ ಹೋದರು. ಹೊಸದಾಗಿ ಹಾಲಿ ಇದ್ದ ದೊಡ್ಡ ಹಳೆಮನೆಯ ಜೊತೆಗೆ ಇನ್ನೆರಡು ಹೊಸಮನೆಗಳನ್ನು ಕಟ್ಟಿಸಿದರು. ಹಳೆಮನೆಯೂ ಸಾಕಷ್ಟು ವಿಶಾಲವಾಗಿತ್ತು. ತಮ್ಮ ಅಪ್ಪ ಲಿಂಗೇಗೌಡ ಹಾಗೂ ಅವ್ವ ತಿಮ್ಮವ್ವ ಸಂಸಾರ ನಡೆಸಿದ ಮನೆ ಅದಾಗಿತ್ತು. ಆಮೇಲೆ ಅವರು ತಮ್ಮ ತಮ್ಮಂದಿರಿಗೆ ಒಳ್ಳೆ ಕಡೆ ನೋಡಿ ಅದೇ ಮನೆಯಲ್ಲಿ ಮದುವೆ ಮಾಡಿದರು. ಗಂಡನ ಕೆಲಸಗಳಿಗೆ ಅವರ ಹೆಂಡತಿ ಚಿನ್ನವ್ವ ಹೆಗಲು ಕೊಟ್ಟು ನಿಂತಳು. ಮನೆಗೆ ಬಂದ ಅವನ ನಾದಿನಿಯರೂ ಯೋಗ್ಯರಾಗಿ ಬಾಳತೊಡಗಿದ್ದರು. ಚಿನ್ನವ್ವನ ಜೊತೆ ಅವರು ಸಲಿಗೆಯಿಂದ ಪ್ರೀತಿಯಿಂದ ಬಾಳಿದರು. ಮೂವರು ಅಣ್ಣ ತಮ್ಮಂದಿರ ಸಂಸಾರಗಳು, ದಿನೇ ದಿನೇ ಉನ್ನತಿಯಾಗುತ್ತಾ